# ಮೂರು ಕಿರುಗತೆಗಳು

■ ಹೊರೆಯಾಲ ದೊರೆಸ್ವಾಮಿ

ಕಲೆ: ಸಂತೋಷ್ ಸಸಿಹಿತ್ಲು



## ಪ್ರೀತಿಯ ಸಿಂಚನ

**ಮಗು** ಒಂದೇ ಸಮನೆ ಅಳುತ್ತಿತ್ತು. ತಾಯಿ ಮಗುವಿಗೆ ಹಾಲು, ಹಣ್ಣು ಕೊಟ್ಟಳು. ಮಗು ಅದನ್ನು ತಿಂದು ಮತ್ತೆ ಅಳತೊಡಗಿತು. ಒಂದಿಷ್ಟು ಊಟವನ್ನು ಕೊಟ್ಟಳು. ಅದೊಂದಿಷ್ಟನ್ನು ತಿಂದು ಮತ್ತೆ ಅಳತೊಡಗಿತು. ಸಿಟ್ಟಿನಿಂದ ಅವಳು 'ನಿನಗಿನ್ನೇನು ಬೇಕಾಗಿದೆ?' ಅಂತ ಗದರಿಸಿದಳು. ಮಗುವಿನ ಅಳು ಇನ್ನೂ ಜೋರಾಯಿತು. ಅಷ್ಟರಲ್ಲಿ ಅಜ್ಜಿ ಬಂದು 'ಮಗು ಯಾಕಮ್ಮ ಅಳುತ್ತಿದೆ?' ಅಂತ ಕೇಳಿದಳು.

ಅಷ್ಟೊತ್ತಿಂದ್ಲು ಒಂದೇ ಸಮನೆ ಚಂಡಿ ಹಿಡ್ಕೊಂಡು ಅಳ್ತಾ ಇದೆ ಅಜ್ಜಿ.

ಹಾಲು ಹಣ್ಣು ಕೊಟ್ಯ?

ಕೊಟ್ಟೆ

ಊಟ ಕೊಟ್ಯ?

ಹೊಟ್ಟೆ ತುಂಬುವಷ್ಟು ಕೊಟ್ಟೆ.

ಪ್ರೀತಿ ಕೊಟ್ಯ?

ಹಾಗಂದ್ರೆ?

ಅಜ್ಜಿ 'ಬಾ ಕಂದಾ' ಅಂತ ಮಗುವನ್ನು ತನ್ನ ಎರಡೂ ಕೈಗಳಿಂದ ಎತ್ತಿಕೊಂಡು, ತೊಡೆಯ ಮೇಲೆ ಮಲಗಿಸಿ, ದೂರಿ ಆಡಿಸುತ್ತಾ 'ಏನು ಮರಿ? ಯಾಕೆ ಅಳ್ತಾ ಇದ್ದೀಯ? ಏನು ಬೇಕು ನಿನಗೆ? ಹೇಳು ನನ್ನ ಚಿನ್ನಾ...' ಅಂತ ನಗುತ್ತಾ ಕೇಳಿದಳು. ಮಗು ಆಗ ಅಳು ನಿಲ್ಲಿಸಿ, ಕಿಲಕಿಲನೆ ನಗತೊಡಗಿತು.

## ಪಾಪ ಪುಣ್ಯ

ಒಮ್ಮೆ ಒಬ್ಬ ಸಾಧು ಪರವೂರಿಗೆ ಹೋದ. ಸುಮಾರು ದೂರ ನಡೆದು ಬಂದದ್ದರಿಂದ ಆಯಾಸವಾಯ್ತು. ಹಸಿವೂ ಆಯ್ತು. ಸಾಧು ಒಂದು ಮನೆಯ ಬಳಿ ನಿಂತು 'ಯಜಮಾನ್ರೆ' ಅಂತ ಕೂಗಿದ. ಇನ್ನೊಂದೆರಡು ನಿಮಿಷಗಳಲ್ಲಿ ಮನೆಯ ಯಜಮಾನ ಒಳಗಿಂದ ಬಂದ. ಸಾಧುವನ್ನು ನೋಡಿ 'ಏನು ಬಂದಿರಿ ಸ್ವಾಮಿ?' ಅಂತ ಕೇಳಿದ.

ಸಾಧು 'ನಾನು ತುಂಬಾ ದೂರದಿಂದ ನಡೆದು ಬಂದಿದ್ದೇನೆ. ಆಯಾಸವಾಗಿದೆ. ಜೊತೆಗೆ ಹಸಿವು. ದಯಮಾಡಿ ಊಟ ಹಾಕುವಿರಾ?' ಅಂತ ಕೇಳಿದ. ಅದಕ್ಕೆ ಮನೆಯ ಯಜಮಾನ 'ಅಗತ್ಯವಾಗಿ. ನೀವು ಕೇಳುವುದು ಹೆಚ್ಚೊ? ನಾನು ನೀಡುವುದು ಹೆಚ್ಚೊ? ದಯಮಾಡಿ ಒಳಗೆ ಬನ್ನಿ' ಅಂತ ಸಾಧುವನ್ನು ತನ್ನ ಮನೆಯೊಳಕ್ಕೆ ಆಹ್ವಾನಿಸಿದ. ಯಜಮಾನನ ಹೆಂಡತಿ ಸಾಧುಗೆ ಹೊಟ್ಟೆ ತಣಿಯುವಷ್ಟು ಊಟ ಹಾಕಿದಳು. ಸಾಧು ಸಂತೃಪ್ತಿ ಹೊಂದಿದ. ಬಳಿಕ ಸ್ವಲ್ಪಹೊತ್ತು ಮನೆಯ ಪಡಸಾಲೆಯ ಮೇಲೆ ವಿಶ್ರಾಂತಿ ತೆಗೆದುಕೊಂಡು ಹೊರಡುವಾಗ, ಒಂದಿಷ್ಟು ದುಡ್ಡನ್ನು ಯಜಮಾನನ ಮುಂದೆ ನೀಡಿದ. ಯಜಮಾನ ಅದನ್ನು ನೋಡಿ 'ಇದೇನು ಸ್ವಾಮಿ?' ಅಂತ ಕೇಳಿದ.

ನೀವು ಊಟ ನೀಡಿದ್ದಕ್ಕೆ, ನಾನು ಮಾಡುವ ಕಾಣಿಕೆ.



ನಾನು ದುಡ್ಡಿಗಾಗಿ ಊಟ ನೀಡಲಿಲ್ಲ. ಪುಣ್ಯದ ಕೆಲಸ ಅಂದುಕೊಂಡಿದ್ದೇನೆ.

ನಿಜ, ನೀವು ದುಡ್ಡಿಗಾಗಿ ಊಟ ನೀಡಲಿಲ್ಲ. ನೀಡಿದ್ದು ನಿಮ್ಮ ಕರುಣೆಯ ಒಡಲು. ಮಾನವೀಯತೆ. ನಾನು ಬಿಟ್ಟಿ ಊಟ ಮಾಡಿದ ಅಳುಕು ನನ್ನನ್ನು ಬಾಧಿಸುತ್ತಿದೆ.

ಆದರೆ, ಹಸಿದು ಬಂದವರಿಗೆ ಊಟ ಹಾಕಿದ್ದಕ್ಕೆ ದುಡ್ಡು ತೆಗೆದುಕೊಳ್ಳುವುದು ಪಾಪ.

ಪಾಪವಲ್ಲ. ನೀವು ಅಪರಿಚಿತನಾದ ನನಗೆ ಊಟ ಹಾಕಿ ಪುಣ್ಯ ಕಟ್ಟಿಕೊಂಡಿದ್ದೀರಿ. ಆ ಪುಣ್ಯ ಮುಂದುವರಿಯಬೇಕು. ಈ ದುಡ್ಡನ್ನು ನಿಮ್ಮ ಸ್ವಂತಕ್ಕೆ ಬಳಸಬೇಕಾಗಿಲ್ಲ. ಇದರಿಂದ ಹಸಿದು ಬರುವ ಇನ್ನೊಬ್ಬರಿಗೆ ಊಟ ಹಾಕಿ. ಆಗ, ಆ ಪುಣ್ಯವೂ ನಿಮಗೆ ಬರುತ್ತದೆ. ಒಬ್ಬರಿಗೊಬ್ಬರು ಕೈ ಜೋಡಿಸುತ್ತಾ ಹೋದರೆ ಪುಣ್ಯ, ಕೈ ಬಿಟ್ಟಾಗ ಪಾಪ ಅಂದು ಸಾಧು ಕೈ ಮುಂದೆ ಮಾಡಿದ. ಬೇರೇನೂ ತೋಚದೆ ನಮ್ರತೆಯಿಂದ ಗಂಡಹೆಂಡತಿ ಸಾಧು ನೀಡಿದ ಹಣವನ್ನು ಪಡೆದುಕೊಂಡರು.